# ಸೋದರಿ ನಿವೇದಿತಾಳ ಸಮಗ್ರ ಕೃತಿಶ್ರೇಣಿ


## ಒಂದು ಪಕ್ಷಿನೋಟ

**ಸರಗೂರು ರಮೇಶ್**

ಅತ್ಯಂತ ವಿಸ್ತಾರವಾದ ನಿವೇದಿತಾಳ ಬರಹಗಳನ್ನು ಒಂದೆಡೆ ಕಲೆಹಾಕಿ, ಕ್ರಮಬದ್ಧವಾಗಿ ಐದು ಸಂಪುಟಗಳಲ್ಲಿ ಪ್ರಕಟಿಸಲಾದ ಕೃತಿಯೇ 'The Complete Works of Sister Nivedita'. ಈ ಕೃತಿಯನ್ನು ಪರಿಚಯಿಸಿ, ವಿಶ್ಲೇಷಿಸಿರುವ ಲೇಖಕರು ಮೈಸೂರು ಶ್ರೀರಾಮಕೃಷ್ಣ ವಿದ್ಯಾಶಾಲಯಲ್ಲಿ ಆಂಗ್ಲ ಉಪನ್ಯಾಸಕರು; ಅವರು ಉತ್ತಮ ಭಾಷಣಗಾರರು ಹಾಗೂ ಬರಹಗಾರರಾಗಿದ್ದಾರೆ.

**ಸೋ**ದರಿ ನಿವೇದಿತಾಳ ಸಮರ್ಪಿತ ಜೀವನವು ಭವ್ಯವಾಗಿರುವಂತೆ ಅವಳು ನೀಡಿರುವ ವಿಪುಲ ಸಾಹಿತ್ಯವೂ ಮಹತ್ವಪೂರ್ಣವಾಗಿದೆ. ಸೋದರಿ ನಿವೇದಿತಾಳ ಕೃತಿಶ್ರೇಣಿಯನ್ನು ಐದು ಸಂಪುಟಗಳಲ್ಲಿ ಮಾಯಾವತಿಯ ಅದ್ವೈತ ಆಶ್ರಮವು ೧೯೬೭ ರಲ್ಲಿ ಪ್ರಕಟ ಮಾಡಿದೆ. ಆಕೆ ಪ್ರಜ್ವಲಿಸುತ್ತಿದ್ದ ಅಗ್ನಿಯಾಗಿದ್ದಳು ಎಂಬುದನ್ನು ಅವಳ ಬರಹಗಳು ರುಜುವಾತು ಮಾಡುತ್ತವೆ. ಭಾರತೀಯ ಸ್ತ್ರೀಯರ ಉದ್ಧಾರಕ್ಕಾಗಿ ಅವಿರತವಾಗಿ ಶ್ರಮಿಸುತ್ತಿದ್ದ ನಿವೇದಿತಾಗೆ ಭಾರತೀಯ ತತ್ತ್ವಶಾಸ್ತ್ರ, ಸಾಹಿತ್ಯ, ಪುರಾಣ, ಇತಿಹಾಸ ಮತ್ತು ಸಂಸ್ಕೃತಿಗಳನ್ನು ಅಧ್ಯಯನ ಮಾಡಿ ಅರಗಿಸಿಕೊಳ್ಳಲು ಸಮಯ ದೊರೆತದ್ದಾದರೂ ಹೇಗೆ ಎಂದು ಆಶ್ಚರ್ಯವಾಗುತ್ತದೆ. ಭಾರತದ ಸಂಸ್ಕೃತಿಯ ಹಿರಿಮೆ, ವೈಭವ ಮತ್ತು ಸಾರಸತ್ವವನ್ನು ಭಾರತೀಯರಿಗೇ ಪರಿಚಯಿಸಿ ಅವರ ಅರಿವನ್ನು ವಿಸ್ತಾರಗೊಳಿಸುವ ಮಹಾ ಕಾರ್ಯವನ್ನು ಆಕೆ ಮಾಡಿದಳು ಎಂಬುದು ನಿರ್ವಿವಾದ. ಆಕೆಯ ಸಮಗ್ರ ಕೃತಿಗಳನ್ನು ಪೂರ್ಣವಾಗಿ ಅಲ್ಲದಿದ್ದರೂ ಒಂದು ಪಕ್ಷಿನೋಟಕ್ಕೆ ದಕ್ಕುವಂತೆ ಪರಿಚಯಿಸುವುದು ಈ ಲೇಖನದ ಉದ್ದೇಶ.

ಸೋದರಿ ನಿವೇದಿತಾಳ ಸಮಗ್ರ ಕೃತಿಶ್ರೇಣಿಯ ಪ್ರಥಮ ಸಂಪುಟದಲ್ಲಿ '**ನಾ ಕಂಡಂತೆ ನನ್ನ ಗುರುದೇವ**' (The Master as I Saw Him) ಎಂಬ ಪ್ರಧಾನ ಭಾಗವಿದೆ. ೧೮೯೫ ನವೆಂಬರ್‌ನಲ್ಲಿ ಲಂಡನ್ನಿನಲ್ಲಿ ಆಕೆ ಮೊದಲ ಬಾರಿಗೆ ಸ್ವಾಮಿ ವಿವೇಕಾನಂದರನ್ನು ಭೇಟಿ ಮಾಡಿದ ಸ್ಪಷ್ಟ ಚಿತ್ರಣವಿದೆ. ಆ ಸಮಯದಲ್ಲಿ ನಿವೇದಿತಾ ಧರ್ಮದ ಪ್ರಾಯೋಗಿಕ ಮತ್ತು ಸಾಕ್ಷಾತ್ಕಾರದ ಆಯಾಮಗಳನ್ನು ಕುರಿತಂತೆ ಬಹಳ ಗಂಭೀರವಾದ ಜಿಜ್ಞಾಸೆಯಲ್ಲಿ ಮುಳುಗಿದ್ದಳು. ಜೀವನದ ಹಲವಾರು ಕ್ಷೇತ್ರಗಳು ಆಕೆಯ ಬೌದ್ಧಿಕ ಸಾಮರ್ಥ್ಯ ಮತ್ತು ಆಸಕ್ತಿಗಳನ್ನು ಜಾಗೃತಗೊಳಿಸಿದ್ದವು. ಅಂತಹ ಸಂದಿಗ್ಧ ಸಮಯದಲ್ಲಿ ಸ್ವಾಮಿ ವಿವೇಕಾನಂದರು ವೇದಾಂತದ ಸನಾತನ ಸತ್ಯಗಳನ್ನು ಸಂದೇಶವಾಗಿ ನೀಡಲು ಲಂಡನ್‌ಗೆ ಬಂದಿದ್ದರು. ಬಾಯಾರಿಕೆಯಿಂದ ಬಳಲಿ ಸಾವಿನಂಚಿಗೆ ಹೋದ ಜನರಿಗೆ ಜೀವ ಜಲವು ಪ್ರಾಪ್ತವಾದಂತೆ ತನಗೆ ಸ್ವಾಮೀಜಿಯವರ ಸನ್ನಿಧಿ ಮತ್ತು ಸಂದೇಶಗಳು ದೊರಕಿದವು ಎಂದು ಆಕೆ ಕೃತಜ್ಞತೆಯಿಂದ ಸ್ಮರಿಸಿದ್ದಾಳೆ. ಆ ಹಿಂದೂ ಯೋಗಿಯು ಮಾತಿನ ಮಧ್ಯೆ ಮಧ್ಯೆ ಉದ್ಧರಿಸುತ್ತಿದ್ದ ಸಂಸ್ಕೃತದ ಶ್ಲೋಕಗಳು ತನ್ನ ಹೃದಯದಲ್ಲಿ ವಿಲಕ್ಷಣವಾದ ಪ್ರಭಾವವನ್ನು ಬೀರುತಿದ್ದವು. ಸ್ವಾಮೀಜಿಯವರ ಮಾತುಗಳನ್ನು ಆಲಿಸಿದ ಹಲವರು, ''ಅದರಲ್ಲಿ ಹೊಸತೇನೂ ಇಲ್ಲ'' ಎಂದು ಸಾಧಾರಣ ಪ್ರತಿಕ್ರಿಯೆ ನೀಡಿದರು. ಆದರೆ ಗಂಭೀರವಾಗಿ ಚಿಂತಿಸಿದ ನಿವೇದಿತಾಗೆ ಅಂತಹ ತೀರ್ಮಾನ ಅನುದಾರವೂ, ಅನ್ಯಾಯವೂ ಆಗಿ ಕಂಡಿತಂತೆ. ''ಭಿನ್ನ ಸಂಸ್ಕೃತಿಯ ಪ್ರತಿನಿಧಿಗಳಾಗಿ, ಒಂದು ಹೊಸ ಮನಸ್ಸಿನಿಂದ ಸ್ವಾಮೀಜಿಯವರು ಯಾವ ಆದರ್ಶವನ್ನು ತಾನು ಉನ್ನತ ಮತ್ತು ಶ್ರೇಷ್ಠ ಎಂದು ಭಾವಿಸಿದ್ದರೋ ಅದನ್ನೇ ಅಭಿವ್ಯಕ್ತಿಸಿದರು'' ಎಂದು ಬರೆದಿದ್ದಾಳೆ ಆಕೆ. ಸ್ವಾಮೀಜಿಯವರ ಧೀರ ಸ್ವಭಾವ ಮತ್ತು ಚಾರಿತ್ರ್ಯವನ್ನು ಆಕೆ ಮುಕ್ತಕಂಠದಿಂದ ಶ್ಲಾಘಿಸಿದ್ದಾಳೆ. ಸ್ವಾಮೀಜಿಯವರು ಪ್ರತಿಪಾದಿಸಿದ ಆತ್ಮವಿಚಾರ ಮತ್ತು ಕರ್ಮ, ಭಕ್ತಿ, ಜ್ಞಾನವೆಂಬ ಜೀವಾತ್ಮದ ಮುಕ್ತಿಯ ಮೂರು ಮಾರ್ಗಗಳ ಸಂದೇಶವು ಅವಳ ಹೃದಯದಲ್ಲಿ ಸಾಕ್ಷಾತ್ಕಾರದ ಸಾಧ್ಯತೆ ಮತ್ತು ಭರವಸೆಯನ್ನು ಅಳಿಸಲಾಗದಂತೆ ಮೂಡಿಸಿದವು ಎಂದು ತನ್ನ ಅಂತರಂಗದ ಭಾವನೆಗಳನ್ನು ನಿವೇದಿತಾ ಇಲ್ಲಿ ದಾಖಲಿಸಿದ್ದಾಳೆ. ಕಾವ್ಯಮಯವಾದ ಭಾಷೆಯಲ್ಲಿ ವೇದಿಕೆಯ ಮೇಲೆ



ನಿಂತು ಧಾರ್ಮಿಕ ವಿಚಾರಗಳನ್ನು ಶ್ರೀಮಂತವರ್ಗದವರಿಗೆ ಹೇಳುತ್ತಾ ರಂಜಿಸುವ ಧರ್ಮಪ್ರಚಾರಕರ ಗುಂಪಿಗೆ ಸೇರಿದವರಲ್ಲ ಸ್ವಾಮಿ ವಿವೇಕಾನಂದರು ಎಂಬುದನ್ನು ಅವಳು ಸ್ಪಷ್ಟವಾಗಿ ಕಂಡುಕೊಂಡೆ ಎಂದು ಬರೆದಿದ್ದಾಳೆ. ಸ್ವಲ್ಪ ಸಾವಧಾನ ಚಿತ್ತದಿಂದ ನಾವು ತನ್ನ ಗುರುದೇವನ ಬಗ್ಗೆ ಆಕೆ ಬರೆದಿರುವುದನ್ನು ಓದುತ್ತಾ ಹೋದರೆ ಆಕೆಯ ಆತ್ಮಕ್ಕೆ ಆಪ್ತರಾಗಿಬಿಡುವುದರಲ್ಲಿ ಸಂದೇಹವೇ ಇಲ್ಲ. ಅಷ್ಟು ಸ್ಪಷ್ಟತೆ, ಪ್ರಾಮಾಣಿಕತೆ ಮತ್ತು ಸತ್ಯತೆಗಳಿಂದ ಆಕೆಯ ಬರಹವು ಕೂಡಿದೆ ಎಂಬುದು ಮನದಟ್ಟಾಗುತ್ತದೆ. ಆಳವಾದ ಅನುಭವಕ್ಕೆ ಸಿಲುಕಿರುವ ಸತ್ಯದರ್ಶನವನ್ನು ಅನ್ಯಭಾಷೆಯಾದ ಆಂಗ್ಲ ಭಾಷೆ ವಿದೇಶಿ ಪರಿಸರದಲ್ಲಿ ಅಭಿವ್ಯಕ್ತಿಸುವಾಗ ಎದುರಾಗುವ ಸವಾಲುಗಳನ್ನು ಕುರಿತು ನಿವೇದಿತಾ ವಿಶ್ಲೇಷಿಸಿದ್ದಾಳೆ. ಸ್ವಾಮೀಜಿಯವರು ಮಾಯೆಯ ಸ್ವರೂಪವನ್ನು ಕುರಿತಂತೆ ಇಂಗ್ಲೀಷಿನಲ್ಲಿ ವಿಶ್ಲೇಷಣೆ ಮಾಡಿದಾಗ ಅರ್ಥಛಾಯೆಯು ಹೇಗೆ ಬದಲಾಗಿಬಿಡುತ್ತದೆ ಎಂದು ಸ್ವಾಮೀಜಿಯವರೇ ಹೇಳಿರುವ ಸಂಗತಿಗಳು ಆಕೆಗೆ ನಿಜವೆನಿಸಿದೆ. ಹೀಗೆ ಆಕರ್ಷಣೀಯವೂ ಅರ್ಧಸತ್ಯವೂ ಅರ್ಧ ಅಸತ್ಯವೂ ಆಗಿ ತೋರಿ ಬರುವ ಇಂದ್ರಿಯ ಜ್ಞಾನ ಮತ್ತು ಆ ಇಂದ್ರಿಯಾನುಭವವನ್ನೇ ಅವಲಂಬಿಸಿರುವ ಮನಸ್ಸಿನ ಸೀಮಿತ ತಿಳುವಳಿಕೆಯು ಮಾಯಾಕ್ಷೇತ್ರದ ವ್ಯಾಪ್ತಿಯೊಳಗೆ ಬರುತ್ತವೆ ಎಂದು ಆಕೆ ಸ್ವಾಮೀಜಿಯವರ ವ್ಯಾಖ್ಯಾನದಿಂದ ಗ್ರಹಿಸಿದಳು. ಮತ್ತು ''ಯಾವುದರಿಂದ ಇದೆಲ್ಲವೂ ವ್ಯಾಪಿಸಲ್ಪಟ್ಟಿರುವುದೋ ಅದನ್ನು ಸ್ವಯಂ ಈಶ್ವರನೆಂದೇ ತಿಳಿ'' ಎಂಬ ಮಾತು ಆಕೆಗೆ ಆಪ್ತವಾಗಿಬಿಟ್ಟಿತು. ಹಿಂದೂಧರ್ಮದ ಈ ಎರಡು ಪರಿಕಲ್ಪನೆಗಳ ಪ್ರಸ್ತಾಪದಲ್ಲಿ ಸ್ವಾಮೀಜಿಯವರ ಸಮಗ್ರ ಸಂದೇಶವು ಅಡಕವಾಗುತ್ತದೆ ಎನ್ನುತ್ತಾಳೆ ನಿವೇದಿತಾ. ಭಾರತದ ಚಿರಂತನ ಸಂದೇಶವೆಂದರೆ ''ಪ್ರಕೃತಿಗಾಗಿ ಪುರುಷನಲ್ಲ; ಪುರುಷನಿಗಾಗಿ ಪ್ರಕೃತಿ'' ಎಂದು ಸ್ವಾಮೀಜಿ ಒತ್ತಿ ಹೇಳಿದರು. ಈ ಎಲ್ಲ ಮಾತುಗಳು ನಿಃಸ್ವಾರ್ಥವಾಗಿ ಮನುಕುಲದ ಸೇವೆಯನ್ನು ಕೈಗೆತ್ತಿಕೊಳ್ಳುವ ಕಾರ್ಯಕ್ಕೆ ನಿವೇದಿತಾಳನ್ನು ಪ್ರೋತ್ಸಾಹಿಸಿದವು ಎಂದು ನಮಗೆ ಆಕೆಯ ಚಿಂತನೆಗಳನ್ನು ಓದಿದಾಗ ಮನವರಿಕೆಯಾಗುತ್ತದೆ.

ಸ್ವಾಮಿ ವಿವೇಕಾನಂದರ ಭೂಮ ವ್ಯಕ್ತಿತ್ವವನ್ನು ಸಾಧಕಿಯೂ, ಶಿಷ್ಯಳೂ ಆದ ನಿವೇದಿತಾ ಸಾಕಷ್ಟು ವಿವರಗಳೊಂದಿಗೆ ಕಟ್ಟಿಕೊಟ್ಟಿದ್ದಾಳೆ. ಆಧ್ಯಾತ್ಮಿಕ ಸಾಧನೆ, ಭಾರತೀಯ ಸಮಸ್ಯೆಗಳು, ಸಂನ್ಯಾಸ, ಗೃಹಸ್ಥಾಶ್ರಮ, ಆಧ್ಯಾತ್ಮಿಕ ಅನುಭವಗಳು, ಸಮಕಾಲೀನ ಸಾಮಾಜಿಕ ಸಂದರ್ಭ ಮುಂತಾದ ಅನೇಕ ವಿಷಯಗಳನ್ನು ಕುರಿತಂತೆ ಹಲವಾರು ಸಂದರ್ಭಗಳಲ್ಲಿ ಸ್ವಾಮಿ ವಿವೇಕಾನಂದರು ವ್ಯಕ್ತಪಡಿಸಿರುವ ಚಿಂತನೆಗಳು ಮತ್ತು ಅಭಿಪ್ರಾಯಗಳು ನಿವೇದಿತಾಳ '**ನಾ ಕಂಡಂತೆ ನನ್ನ ಗುರುದೇವ**' ಎಂಬ ಭಾಗದಲ್ಲಿ ಸಂಗ್ರಹಗೊಂಡಿವೆ. ಸಾಧಕರಿಗೆ ಈ ಗ್ರಂಥವು ಅತ್ಯಂತ ಉಪಯುಕ್ತವೂ, ಅಮೂಲ್ಯವೂ ಆಗಿದೆ. ತನ್ನ ಗುರುದೇವನೊಡನೆ ತಾನು ಭೇಟಿಕೊಟ್ಟ ಸ್ಥಳಗಳ ಬಗ್ಗೆ ಟಿಪ್ಪಣಿಗಳನ್ನು ಮಾಡಿರುವ ಅಧ್ಯಾಯವೂ ಮೊದಲ ಸಂಪುಟದಲ್ಲಿದೆ. ನೈನಿತಾಲ್, ಆಲ್ಮೋರಾ, ಬಾರಾಮುಲ್ಲಾ, ಶ್ರೀನಗರ, ಅಮರನಾಥ, ಕಾಶ್ಮೀರ ಮುಂತಾದ ಸ್ಥಳಗಳಿಗೆ ಆಕೆಯ ಹೃದಯವು ಸ್ಪಂದಿಸಿದ ರೀತಿ, ಈ ಸ್ಥಳಗಳ ವಿಶೇಷತೆಯೆಲ್ಲವನ್ನೂ ತನ್ನ ಅನುಭವದ ವಿವರಗಳೊಂದಿಗೆ ನಿವೇದಿತಾ ಟಿಪ್ಪಣಿಸಿದ್ದಾಳೆ.

ಸ್ವಾಮಿ ವಿವೇಕಾನಂದರ ರಾಷ್ಟ್ರೀಯ ಪ್ರಾಮುಖ್ಯತೆ, ಅವರ ಜೀವನ ಮತ್ತು ಸಾಧನೆ, ದೇಶಭಕ್ತನಾಗಿ ಸ್ವಾಮಿ ವಿವೇಕಾನಂದರು, ಪಾಶ್ಚಿಮಾತ್ಯ ರಾಷ್ಟ್ರಗಳಿಗಾಗಿ ಸ್ವಾಮೀಜಿಯವರ ಕಾರ್ಯಪ್ರಣಾಳಿಗಳನ್ನು ಕುರಿತಂತೆ ಆಕೆ ಬರೆದಿರುವ ಲೇಖನಗಳು ಮತ್ತು ನೀಡಿರುವ ಉಪನ್ಯಾಸಗಳು ಒಂದು ಪ್ರತ್ಯೇಕ ಅಧ್ಯಾಯವನ್ನೇ ನಿರ್ಮಿಸಿದೆ. ಸ್ವಾಮೀಜಿಯವರ ವಿರಾಟ್‌ವ್ಯಕ್ತಿತ್ವವನ್ನು ಶಬ್ದಗಳಲ್ಲಿ ಸೆರೆ ಹಿಡಿಯುವುದು ಅಸಂಭವ ಎಂದು ಅವಳು ಒಪ್ಪಿ, ಕೇವಲ ತನ್ನ ದೃಷ್ಟಿ ಮತ್ತು ತಿಳುವಳಿಕೆಯನ್ನು ದಾಖಲಿಸಿರುವುದರಲ್ಲಿ ತೃಪ್ತಿಪಟ್ಟುಕೊಳ್ಳುತ್ತೇನೆ ಎಂದು ನಮ್ರತೆಯಿಂದ ತನ್ನ ಅಸಹಾಯಕತೆಯನ್ನು ಸ್ವಾಮಿ ಬ್ರಹ್ಮಾನಂದರೊಡನೆ ಹಂಚಿಕೊಂಡಿದ್ದಾಳೆ.

ಸ್ವಾಮೀಜಿಯವರು ನೀಡಿರುವ ಸ್ಫೂರ್ತಿಯಿಂದ ''Kali the Mother'' ಎಂಬ ಪುಟ್ಟ ಪುಸ್ತಕವನ್ನು ಬರೆದಿದ್ದಳು. ಇದು ಕೊನೆಯ ಅಧ್ಯಾಯವಾಗಿ ಮೊದಲ ಸಂಪುಟದಲ್ಲಿ ಸೇರಿಕೊಂಡಿದೆ. ಕಾಳಿಮಾತೆಯನ್ನು ಕುರಿತು ಆಕೆ ನೀಡಿರುವ ವ್ಯಾಖ್ಯಾನ ಮತ್ತು ಒಳನೋಟಗಳು ಹಿಂದೂಗಳ ತಾತ್ತ್ವಿಕ ಮತ್ತು ಧಾರ್ಮಿಕ ಚಿಂತನೆಗೆ ನಿವೇದಿತಾ ಕೊಟ್ಟಿರುವ ಕೊಡುಗೆಯಾಗಿದೆ ಎಂದರೆ ಉತ್ಪ್ರೇಕ್ಷೆಯಲ್ಲ.

ಸೋದರಿ ನಿವೇದಿತಾಳ ಅಧ್ಯಯನಶೀಲತೆ, ಅಸಾಧಾರಣ ಮೇಧಾಶಕ್ತಿ, ಓಜಸ್ವಿಯಾದ ಅಂತರಂಗದ ತಪಸ್ಸು, ಆಲೋಚನೆಗಳು ತೀಕ್ಷ್ಣವಾದ ಅಭಿವ್ಯಕ್ತಿ, ಅಂತರಂಗದ ಭಾವಗಳಿಗೆ, ಅನುಭವಗಳಿಗೆ ಸ್ಪಷ್ಟರೂಪು ಕೊಡುವ ಅಭಿವ್ಯಕ್ತಿ ಸಾಮರ್ಥ್ಯಗಳು ಆಕೆಯ ಕೃತಿಶ್ರೇಣಿಯನ್ನು ಓದುತ್ತಾ ನಡೆದಂತೆ ನಮ್ಮನ್ನು ಮೂಕವಾಗಿಸಿಬಿಡುತ್ತವೆ.

ಎರಡನೆಯ ಸಂಪುಟದ ಮೊದಲ ಅಧ್ಯಾಯವೇ The Web of Indian Life ಎಂದು. ಪೌರಾತ್ಯ ರಾಷ್ಟ್ರಗಳಲ್ಲಿ ತಾಯಿ, ಪತ್ನಿಯಾಗಿ ಹಿಂದೂ ಮಹಿಳೆ, ಮರಣದಂತೆ ಶಕ್ತಿಶಾಲಿಯಾದ ಪ್ರೇಮ, ರಾಷ್ಟ್ರೀಯ ಜೀವನವಾಹಿನಿಯಲ್ಲಿ ಸ್ತ್ರೀಯ ಸ್ಥಾನ, ಪಾಶ್ಚಾತ್ಯ ಮಹಿಳೆಯರ ಸಮಕಾಲೀನ ಸಮಸ್ಯೆಗಳು, ಭಾರತೀಯ ಜಾತಿಗಳ ಸ್ವರೂಪದ ಅಧ್ಯಯನ, ಭಾರತೀಯ ಚಿಂತನೆಯ ಸಮನ್ವಯ, ಜನ್ಮ ಮತ್ತು ಮರಣ ಚಕ್ರ, ಶಿವಮಹಾದೇವನೆಂಬ ಮಹಾ ದೇವತೆಯ ಕಥೆ, ಭಾರತದಲ್ಲಿ ಇಸ್ಲಾಂ, ಭಾರತೀಯ ತೀರ್ಥಯಾತ್ರೆ ಎಂಬ ವಿಷಯಗಳ ವಿಹಂಗಮ ನೋಟವೇ ನಮಗೆ ದೊರಕುತ್ತದೆ. ವಿದೇಶೀ ಧರ್ಮಪ್ರಚಾರಕರು ಭಾರತೀಯ ಸಂಸ್ಕೃತಿಯನ್ನು ಋಣಾತ್ಮಕವಾಗಿ ಅಪಪ್ರಚಾರ ಮಾಡುತ್ತಿದ್ದ ಸಂದರ್ಭದಲ್ಲಿ ಭಾರತೀಯ ಜೀವನ ಪದ್ಧತಿ ಮತ್ತು ಚಿಂತನೆಯನ್ನು ವಸ್ತುನಿಷ್ಠವಾದ ತಲಸ್ಪರ್ಶೀ ಅಧ್ಯಯನದ ಮೂಲಕ ಜಗತ್ತಿಗೆ ನಿವೇದಿತಾ ಪರಿಚಯಿಸಿದ್ದಾಳೆ. ೧೯೦೪ರಿಂದಲೇ ಇಂತಹ ವಿಷಯಗಳನ್ನು ಪ್ರತಿಪಾದಿಸುತ್ತಾ ಬಂದ ನಿವೇದಿತಾಳ ಧ್ವನಿಯಲ್ಲಿ, ಅಭಿವ್ಯಕ್ತಿಯಲ್ಲಿ ಒಂದು ನಿಷ್ಪಕ್ಷತೆಯಿದೆ, ಅಧಿಕೃತತೆಯಿದೆ. ನಮ್ಮ ಹಬ್ಬಗಳು, ಕೌಟುಂಬಿಕ ಜೀವನ ವಿಧಾನ, ನಮ್ಮ ಸಂಸ್ಕೃತಿಯನ್ನು ಕಲ್ಕತ್ತಾದಲ್ಲಿ

ಜನರ ನಡುವೆ ಬದುಕುತ್ತಾ ಕಂಡ ಆಕೆ, ಆ ಅಂಶಗಳನ್ನು ಅರ್ಥೈಸುವ ಪರಿ ಅನನ್ಯವಾದುದು. ಭಾರತೀಯರ ಜೀವನದ ಒಳಗನ್ನು ಒಂದು ಕ್ರಮಬದ್ಧವಾದ ಅಧ್ಯಯನದ ಮೂಲಕ ಅನಾವರಣಗೊಳಿಸುವುದನ್ನು ಇಲ್ಲಿ ಕಾಣಬಹುದು. ಹಿಂದೂಗಳ ಜೀವನದ ಮಾಧುರ್ಯ ಮತ್ತು ನಮ್ಮ ಸ್ತ್ರೀಯರ ಆಳವಾದ ವಿಶ್ಲೇಷಣೆಯನ್ನು ತೀವ್ರತರವಾದ ಸಹಾನುಭೂತಿ ಮತ್ತು ಪ್ರೇಮದಿಂದ ನಿವೇದಿತಾ ಬರೆದಿರುವುದು ನಮ್ಮ ಅನುಭವಕ್ಕೆ ನಿಸ್ಸಂದೇಹವಾಗಿ ಬರುತ್ತದೆ. ಈ ದೇಶಪ್ರೇಮವನ್ನು ಅವಳ ಪ್ರತಿಯೊಂದು ವಾಕ್ಯದಲ್ಲಿಯೂ ನಾವು ದರ್ಶಿಸಬಹುದು. ಭಾರತೀಯ ಮಹಿಳೆಯನ್ನು ಒಂದೆಡೆ ಆಕೆ ಈ ನೆಲದ ಕವಿತೆ ಎಂದು ವರ್ಣಿಸುತ್ತಾಳೆ. ನಗರದಲ್ಲಿ ಕಾಣುವ ಸಾಂಪ್ರದಾಯಿಕ ಬದುಕು ಪ್ರತಿಕೂಲ ಸನ್ನಿವೇಶದಲ್ಲಿ ಮಾರ್ಪಾಡು ಮಾಡದೇ ಅನುಸರಿಸುತ್ತಿರುವ ಗ್ರಾಮೀಣ ಬದುಕೇ ಆಗಿದೆ ಎಂಬುದು ಅವಳ ಅಭಿಪ್ರಾಯ. ಗೋವು ಎಂಬ ಪ್ರಾಣಿಯು ಭಾರತೀಯ ಜೀವನ ವಿಧಾನದ ಒಂದು ಅವಿಭಾಜ್ಯ ಅಂಗವಾಗಿರುವುದು ನಿವೇದಿತಾಳ ಕುತೂಹಲವನ್ನು ಆಳವಾಗಿ ಮೂಡಿಸಿದೆ. ಆರ್ಯರು ಮತ್ತು ಆಕಳ ನಡುವಿನ ಸಂಬಂಧದ ಸ್ವರೂಪವೇ ಭಾರತವನ್ನು ಪ್ರಭಾವಿಸಿದೆ.

ನಮ್ಮ ಸಾಂಸ್ಕೃತಿಕ ಜೀವನದ ಹಲವಾರು ಆಯಾಮಗಳನ್ನು ನಿವೇದಿತಾ ಆಪ್ತವಾಗಿ ವಿಶ್ಲೇಷಿಸುವ ರೀತಿ ಅದ್ಭುತವಾಗಿದೆ. ನಮ್ಮನ್ನು ಆಶ್ಚರ್ಯಚಕಿತಗೊಳಿಸುವ ಮತ್ತೊಂದು ಸಂಗತಿಯೆಂದರೆ ಈ ಕೃತಿಗಳಲ್ಲಿರುವ ವಿಷಯ ವೈವಿಧ್ಯತೆ. ಪ್ರೇಮ ಮತ್ತು ಮರಣವನ್ನು ಕುರಿತಂತೆ ಒಂದು ಭಾರತೀಯ ಅಧ್ಯಯನ ಎಂಬ ವಿಭಾಗದಲ್ಲಿ ಜೀವಚೈತನ್ಯ, ಪ್ರೇಮ, ಅಂತರ್ದೃಷ್ಟಿ, ಶಾಂತಿ, ಪ್ರಿಯತಮನಾದ ಭಗವಂತನ ಜೊತೆ ಜೀವಾತ್ಮನ ಸಂವಾದ, ಸತ್ತವರಿಗಾಗಿ ಹಿಂದೂಗಳು ಮಾಡುವ ಸಂಸ್ಕಾರಗಳು ಮುಂತಾದ ಹತ್ತು ಹಲವು ಸಂಗತಿಗಳನ್ನು ಕುರಿತು ತನ್ನ ಬರಹ, ಭಾಷಣ ಮತ್ತು ಚಿಂತನೆಗಳನ್ನು ದಾಖಲಿಸಿದ್ದಾಳೆ.

ಮೂರನೆಯ ಸಂಪುಟದ ಮೊದಲ ಭಾಗವು ಭಾರತೀಯ ಕಲೆಯ ಬಗ್ಗೆ ನಿವೇದಿತಾ ಬರೆದಿರುವ ಲೇಖನಗಳನ್ನು ಒಳಗೊಂಡಿದೆ. ಅದರ ಜೊತೆಗೆ ಭಾರತೀಯ ಮತ್ತು ಯುರೋಪಿನ ಕಲಾಕೃತಿಗಳು ಪ್ರಶಂಸೆ ಮತ್ತು ವಿಶ್ಲೇಷಣೆಗಳೂ ಸೇರಿವೆ. ಭಾರತೀಯ ಕಲೆಗಳ ಪುನರುಜ್ಜೀವನವೂ ಆಕೆಯ ಅಭೀಪ್ಸೆ ಮತ್ತು ಕನಸಾಗಿತ್ತು. ಕಲೆಯೊಳಗೆ ಒಂದು ಸಾರ್ವತ್ರಿಕವಾದ ಭಾಷೆಯಿದೆ ಎಂದೂ, ಅದರ ಪುನರ್ಜನ್ಮವು ರಾಷ್ಟ್ರನಿರ್ಮಾಣಕ್ಕೆ ಅತ್ಯಗತ್ಯವೆಂದೂ ಆಕೆ ನಂಬಿದ್ದಳು. ಆದ್ದರಿಂದ ಕಲೆಯ ಬಗ್ಗೆ, ಅದರಲ್ಲೂ ವಿಶೇಷವಾಗಿ ಭಾರತೀಯ ಕಲೆಯನ್ನು ಕುರಿತು ಆಕೆ ನೀಡಿರುವ ತಾತ್ತ್ವಿಕ ಚಿಂತನೆ ಮತ್ತು ಒಳನೋಟಗಳು ಪ್ರಾಮುಖ್ಯತೆಯನ್ನು ಪಡೆಯುತ್ತವೆ. ನಮ್ಮ ಕಲೆ ಆಧ್ಯಾತ್ಮಿಕತೆ ಮತ್ತು ರಾಷ್ಟ್ರೀಯತೆಯ ಭಾವನೆಗಳಿಂದ ಸ್ಫೂರ್ತಿ ಪಡೆದು ಅಭಿವ್ಯಕ್ತಗೊಂಡಿದೆ. ರಾಷ್ಟ್ರಪ್ರಜ್ಞೆಯು ಜಾಗೃತಗೊಳ್ಳುತ್ತಿರುವ ಆ ಸಂದರ್ಭದಲ್ಲಿ ಚಿತ್ರಕಲಾವಿದನ ವೃತ್ತಿಯನ್ನು ಕೇವಲ ಅನ್ನಸಂಪಾದನೆಯ ಮಾರ್ಗ ಎಂದು ಭಾವಿಸದೆ ತನ್ನಷ್ಟಕ್ಕೆ ಅದು ಉನ್ನತವಾದ ಶಿಕ್ಷಣವಾಗಿದೆ ಎಂದು ತಿಳಿಯಬೇಕೆಂಬುದು ಆಕೆಯ ಅಭಿಪ್ರಾಯ. ಭಾರತೀಯ ತರುಣ ಕಲಾವಿದರನ್ನು ಆಕೆ ಆಧುನಿಕ ಸ್ವದೇಶಿ ಕಲೆಗಳ ಅಭಿವೃದ್ಧಿಗಾಗಿ ಶ್ರಮಿಸುವಂತೆ ಪ್ರೋತ್ಸಾಹಿಸಿದಳು. ಅವನೀಂದ್ರನಾಥ್ ಠಾಗೋರ್, ನಂದಲಾಲ್ ಬೋಸ್, ಬಾಬು ಉಪೇಂದ್ರ ಕಿಶೋರ್ ರಾಯ್, ಅಸಿತ್‌ಕುಮಾರ್ ಹಲ್ದಾರ್, ಸುಖಲತಾರಾವ್, ಸಮರೇಂದ್ರನಾಥ್ ಗುಪ್ತ, ಮುಂತಾದ ನಮ್ಮ ದೇಶದ ಪ್ರತಿಭಾವಂತ ಕಲಾವಿದರು ಮತ್ತು ಅವರ ಕೃತಿಗಳ ಜೊತೆಗೆ ಕೆಲವು ಪಾಶ್ಚಿಮಾತ್ಯ ಕಲಾವಿದರು ಮತ್ತು ಅವರ ಪ್ರಾತಿನಿಧಿಕ ಕೃತಿಗಳ ವಿಶ್ಲೇಷಣೆಯೂ ನಮಗೆ ಇಲ್ಲಿ ದೊರಕುವುದು ಪಾಶ್ಚಿಮಾತ್ಯ ಕಲೆಗಳ ತತ್ತ್ವಗಳು ಮತ್ತು ಭಾರತೀಯ ಕಲೆಗಳ ತಾತ್ತ್ವಿಕ ಹಿನ್ನೆಲೆಯ ಒಂದು ತುಲನಾತ್ಮಕ ಅಧ್ಯಯನವೇ ಇಲ್ಲಿ ಕಾಣುತ್ತದೆ. ಕಳೆದು ಹೋಗಿದ್ದ ಪುರಾತನ ಭಾರತೀಯ ಕಲೆಗಳು ಮರುಹುಟ್ಟು ಪಡೆದು ಪ್ರವರ್ಧಮಾನಕ್ಕೆ ಬರುವಂತೆ ನಿವೇದಿತಾ ಸಕ್ರಿಯವಾಗಿ ಪರಿಶ್ರಮಿಸಿದಳು ಎಂದು ಈ ಎಲ್ಲಾ ಲೇಖನಗಳಿಂದ ತಿಳಿದು ಬರುತ್ತದೆ.

'ಹಿಂದೂ ಧರ್ಮದ ತೊಟ್ಟಿಲ ಕಥೆಗಳು' (Cradle Tales of Hinudism) ಎಂಬ ವಿಸ್ತಾರವಾದ ಭಾಗವು ಮೂರನೆಯ ಸಂಪುಟದಲ್ಲಿ ನಮ್ಮ ಮನಸ್ಸನ್ನು ಗಾಢವಾಗಿ ಆಕರ್ಷಿಸುತ್ತದೆ. ರಾಮಾಯಣ, ಮಹಾಭಾರತ ಮತ್ತು ಪುರಾಣಗಳ ಹಲವಾರು ಕಥೆಗಳನ್ನು ನಿವೇದಿತಾ ಮತ್ತೆ ಸುಂದರವಾಗಿ ನಿರೂಪಿಸಿದ್ದಾಳೆ. ಅವುಗಳ ಶೈಲಿ, ಕಥಾನಿರೂಪಣೆ, ತಾಜಾತನ, ಸಾಹಿತ್ಯಕ ಸೌಂದರ್ಯಗಳು ನಿವೇದಿತಾಳ ಸಾಹಿತ್ಯಪ್ರಜ್ಞೆ ಮತ್ತು ಪ್ರತಿಭೆಗೆ ನಿದರ್ಶನವಾಗಿ ನಿಲ್ಲುತ್ತವೆ. ಶ್ರೀಮತಿ ಮ್ಯಾಕ್ಲಿಯಾಡ್‌ಳಿಗೆ ಬರೆದ ಪತ್ರದಲ್ಲಿ ಮಕ್ಕಳಿಗಾಗಿ ಈ ಕಥೆಗಳನ್ನು ಮತ್ತೆ ಹೇಳುವ ಅಗತ್ಯವನ್ನು ಒತ್ತಿಹೇಳಿದ್ದಾಳೆ. ಬಾಲಯೇಸು, ಧ್ರುವ, ಪ್ರಹ್ಲಾದ, ಗೋಪಾಲ ಮುಂತಾದ ಕಥೆಗಳ ಮೂಲಕ ಮಕ್ಕಳ ಮನಸ್ಸನ್ನು ಮುಟ್ಟಬೇಕೆಂಬ ಹಂಬಲ ವ್ಯಕ್ತಪಡಿಸಿದ್ದಾಳೆ. ಅಮೇರಿಕಾ ಮತ್ತು ಪಾಶ್ಚಿಮಾತ್ಯ ರಾಷ್ಟ್ರಗಳ ಮಕ್ಕಳ ಬೆಳವಣಿಗೆಯನ್ನೂ ಆಕೆ ತನ್ನ ಲಕ್ಷ್ಯದಲ್ಲಿಟ್ಟುಕೊಂಡು ಆಯ್ದು ಕಥೆಗಳ ನಿರೂಪಣೆಯನ್ನು ಪರಿಣಾಮಕಾರಿಯಾಗಿ ಮಾಡಿದ್ದಳೆ.

ರಿಲಿಜನ್ ಮತ್ತು ಧರ್ಮ, ಮುಕ್ತಿ, ಮಹಾಯಜ್ಞ, ಹಿಂದೂ ಧರ್ಮದ ಮುಕುಟ, ಹಿಂದುಧರ್ಮ ಮತ್ತು ಸಂಘಟನೆ, ಸಹಕಾರ, ಸಮಾಜ, ವೈರಾಗ್ಯವೆಂಬ ಧ್ಯೇಯ, ಪ್ರಾಮಾಣಿಕತೆ, ಸಾವನ್ನು ಎದುರಿಸುವ ಬಗ್ಗೆ, ನೈಜ ಮಹತ್ವಾಕಾಂಕ್ಷೆ, ಚಾರಿತ್ರ್ಯ, ವಿವೇಕ, ಅರ್ಹತೆ, ಆಚಾರ್ಯ, ಗುರು ಮತ್ತು ಶಿಷ್ಯ, ಸಾಕ್ಷಾತ್ಕಾರ, ಪ್ರಗತಿ, ಕರ್ಮ, ಶ್ರದ್ಧೆಯ ಶಕ್ತಿ, ಚಿಂತನಶೀಲ ಬದುಕು, ಹೊಣೆಗಾರಿಕೆ ಮುಂತಾದ ಅನೇಕ ವಿಷಯಗಳನ್ನು ನಿವೇದಿತಾ ಚಿಂತಿಸಿರುವ ಕ್ರಮ ಆಕೆ ಬರೆದಿರುವ ಪ್ರಬಂಧಗಳಲ್ಲಿ ನಮಗೆ ದೊರೆಯುವುದು. ಮೂರನೆಯ ಸಂಪುಟದಲ್ಲಿ ಸುಮಾರು ನೂರು ಪುಟಗಳವರೆಗೆ ವಿಸ್ತಾರಗೊಂಡಿರುವ ವೈವಿಧ್ಯಮಯ ವಿಷಯಗಳ ಟಿಪ್ಪಣಿ ಮತ್ತು ಪ್ರಬಂಧಗಳು ನಮ್ಮ ಅರಿವಿನ ಕ್ಷಿತಿಜವನ್ನು ಸತತವಾಗಿ ವಿಸ್ತರಿಸುತ್ತಾ ನಮ್ಮ ವಿವೇಚನಾ ಬುದ್ಧಿಯ ಬಹುಮುಖೀ ಆಯಾಮಗಳನ್ನು ಪರಿಚಯಿಸುತ್ತದೆ.

ಮೂರನೆಯ ಸಂಪುಟದ ಕೊನೆಯ ಭಾಗವು 'ಧೀರೋದಾತ್ತ ಹಿಂದೂಧರ್ಮ' (Aggressive Hinduism) ಎಂಬ ಶೀರ್ಷಿಕೆಯನ್ನು ಹೊಂದಿದೆ. ಇಲ್ಲಿ Aggressive ಎಂಬ ಪದವು ಧನಾತ್ಮಕವಾಗಿ 'ಪ್ರಚ್ಛನ್ನ ಶಕ್ತಿಯುಳ್ಳದ್ದು' ಎಂಬ ಧ್ವನಿಯನ್ನು ಹೊಂದಿದೆ. ವೇದಗಳ ಮತ್ತು ಜ್ಞಾನಯೋಗದ ತವರುಮನೆಯಾದ ಭಾರತವು ಯೂರೋಪಿನ ಅನುಕರಣೆಯನ್ನು ಕುರುಡು ಕುರುಡಾಗಿ ಮಾಡುವಷ್ಟು ತನ್ನತನವನ್ನು ಕಳೆದುಕೊಳ್ಳಬಾರದು. ನಿಷ್ಕ್ರಿಯತೆಯ ಬದಲಾಗಿ ಸಕ್ರಿಯ ಪಾಲ್ಗೊಳ್ಳುವಿಕೆ ಭಾರತದ ಶಿಕ್ಷಣ ಮತ್ತು ಸಮಾಜದಲ್ಲಿ ವ್ಯಾಪಿಸಬೇಕು. ಇಂದು ಭಾರತವು ಬಲಾಢ್ಯವಾಗಿ ತನ್ನ ಆಧ್ಯಾತ್ಮಿಕ ಸಂಸ್ಕೃತಿಯ ಅಂತಃಸತ್ವದೊಂದಿಗೆ ಆಕ್ರಮಣಕಾರಿಯಾಗಬೇಕು. ಸಾಮಾಜಿಕ ಮನೋಭಾವ ಮತ್ತು ಧೋರಣೆಗಳಲ್ಲಿ ಕ್ರಾಂತಿಕಾರಿಯಾದ ಬದಲಾವಣೆಯಾಗಬೇಕು. ಸಮಾಜದ ಮೂಲಘಟಕವಾದ ವ್ಯಕ್ತಿಯು ಸತ್ವಪೂರ್ಣನೂ, ಶಕ್ತಿಶಾಲಿಯೂ ಆದರೆ ಮಾತ್ರ ಭಾರತವೆಂಬ ಸಮಷ್ಟಿಯು ಒಂದು ಬಲಿಷ್ಠ ರಾಷ್ಟ್ರವಾಗಿ ಹೊರಹೊಮ್ಮುವುದು ಸಾಧ್ಯ. ಹಾಗಾಗಲು ವ್ಯಕ್ತಿಯ ಚಾರಿತ್ರ್ಯಶುದ್ಧಿಯೇ ಆಧ್ಯಾತ್ಮಿಕತೆಯಾಗಿ ಪರಿಣಮಿಸುವಷ್ಟು ನಿಷ್ಠೆ ಮತ್ತು ಪ್ರಾಮಾಣಿಕತೆಯ ಅಗತ್ಯವಿದೆ ಎನ್ನುತ್ತಾಳೆ ನಿವೇದಿತಾ. ನಮ್ಮ ಧ್ಯೇಯ, ನಮ್ಮ ಮುಂದಿರುವ ಕಾರ್ಯ ಮುಂತಾದ ಚಿಂತನಪೂರ್ಣ ಪ್ರಬಂಧಗಳನ್ನು ಬರೆದು ಭಾರತೀಯರ ತಾಮಸಿಕ ಆಲಸ್ಯವನ್ನು ಬಡಿದೆಚ್ಚರಿಸಿ ಪರಾಕ್ರಮ ಶಾಲಿಗಳಾಗಲು ರಣೋತ್ಸಾಹ ತುಂಬಿದ ಕರೆಯನ್ನು ನಮಗೆ ನೀಡುತ್ತಾಳೆ ವಿರಾಗ್ರಣಿಯಾದ ನಿವೇದಿತಾ.

ಸಮಗ್ರ ಕೃತಿಶ್ರೇಣಿಯ ನಾಲ್ಕನೇ ಸಂಪುಟವು ಭಾರತದ ಇತಿಹಾಸದ ಹೆಜ್ಜೆಗುರುತುಗಳನ್ನು ಬಹಳ ವಿಸ್ತಾರವಾಗಿ ಮೊದಲ ಅಧ್ಯಾಯದಲ್ಲಿ ವಿವೇಚಿಸುತ್ತದೆ. ಭಾರತದ ಇತಿಹಾಸ ಮತ್ತು ಅದರ ಅಧ್ಯಯನ, ಬೌದ್ಧಧರ್ಮದ ನಗರಗಳು, ಬಿಹಾರ, ಪುರಾತನ ಅಜಂತಾ, ಚೀನಾಯಾತ್ರಿಕ ಫಾ-ಹಿ-ಯಾನ್, ಹಿಂದೂಧರ್ಮದ ಸಮನ್ವಯವಾಗಿ ಎಲಿಫೆಂಟಾ, ಭಾರತೀಯ ಸಂಶೋಧನೆಯ ಕೆಲವು ಸಮಸ್ಯೆಗಳು, ಬೌದ್ಧಧರ್ಮ ಮತ್ತು ಹಿಂದೂಧರ್ಮದ ನಡುವಿನ ಸಂಬಂಧದ ಸ್ವರೂಪ, ಗುಪ್ತರ ಆಳ್ವಿಕೆಯಲ್ಲಿ ವೈಷ್ಣವಧರ್ಮದ ಉದಯ, ವಾರಣಾಸಿಯ ಅಧ್ಯಯನ, ಬುದ್ಧಗಯೆ ಮುಂತಾದ ಲೇಖನಗಳು ಭಾರತದ ಆತ್ಮವನ್ನು ವಿದೇಶೀಯಳಾದ ನಿವೇದಿತಾ ಕಂಡುಕೊಂಡು ಮಾಡಿರುವ ಪ್ರಾಮಾಣಿಕ ಪ್ರಶಂಸೆಗಳಾಗಿವೆ. ನಂತರ ಭಾರತೀಯ ಸಮಾಜದ ಆದರ್ಶಗಳು, ಸ್ವದೇಶೀ ಆಂದೋಲನ, ಭಾರತೀಯ ಜೀವನದ ಐಕ್ಯತೆ ಮತ್ತು ಅಂದಿನ ಸಮಾಜದಲ್ಲಿ ಸ್ತ್ರೀಯರ ಸ್ಥಾನವನ್ನು ಕುರಿತು ಆಕೆಗಿದ್ದ ಕಳಕಳಿ ಮತ್ತು ದೇಶಪ್ರೇಮವನ್ನು ವ್ಯಕ್ತಪಡಿಸುವ ಲೇಖನಗಳೂ ಇವೆ.

ನಾಲ್ಕನೆಯ ಸಂಪುಟದ ಕೊನೆಯ ಅಧ್ಯಾಯವು ರಾಷ್ಟ್ರೀಯ ಶಿಕ್ಷಣವನ್ನು ಕುರಿತಂತೆ ನಿವೇದಿತಾಳು ಪ್ರಸ್ತುತಪಡಿಸಿರುವ ಪ್ರಬಂಧಗಳಾಗಿವೆ. ಸ್ವಯಂ ಶಿಕ್ಷಕಿಯಾಗಿ, ಹೆಣ್ಣುಮಕ್ಕಳ ಶಾಲೆಯನ್ನು ಭಾರತದಲ್ಲಿ ತೆರೆದು, ಆ ಮಕ್ಕಳ ಉದ್ಧಾರಕ್ಕಾಗಿ ದುಡಿದ ಆಕೆ ಅನೇಕ ಮೌಲಿಕವಾದ ಮತ್ತು ಪ್ರಾಯೋಗಿಕವಾದ ಚಿಂತನೆಗಳನ್ನು ಇಲ್ಲಿ ಮೂಡಿಸಿದ್ದಾಳೆ, ಭಾರತದ ಭವಿಷ್ಯವು ಪ್ರಧಾನವಾಗಿ ಶಿಕ್ಷಣವನ್ನೇ ಅವಲಂಬಿಸಿದೆ ಎಂದು ಆಕೆ ಮನಗಂಡಿದ್ದಳು. ಕೈಗಾರಿಕೆ ಮತ್ತು ವಾಣಿಜ್ಯ ಕ್ಷೇತ್ರಗಳು ಮುಖ್ಯವೇ ಆದರೂ ಆ ಕ್ಷೇತ್ರಗಳು ಸುಶಿಕ್ಷಿತರ ವಿದ್ಯಾವಂತರ ದುಡಿಮೆಯಿಂದ ಬೆಳೆಯುವಂತಾಗಿವೆ. ಆದ್ದರಿಂದ ಶಿಕ್ಷಣ ಕ್ಷೇತ್ರವು ಜೀವನದ ಎಲ್ಲಾ ಆಯಾಮಗಳನ್ನೂ ಸಮರ್ಪಕವಾಗಿ ಪ್ರತಿನಿಧಿಸಬೇಕು. ಅಲ್ಲಿ ತಾಂತ್ರಿಕ ಶಿಕ್ಷಣ, ಉನ್ನತ ಸಂಶೋಧನೆ, ಪುರುಷರು ಮತ್ತು ಸ್ತ್ರೀಯರಿಗೆ ಸಮಾನವಾಗಿ ಲಭ್ಯವಾಗುವ ವಿದ್ಯಾಭ್ಯಾಸ, ಮತ್ತು ಎಲ್ಲಕ್ಕೂ ಮಿಗಿಲಾಗಿ ಭಾರತೀಯರು ಸ್ವಾವಲಂಬಿಗಳಾಗುವಂತಹ, ಸಮರ್ಥರಾಗಿ ಆತ್ಮವಿಶ್ವಾಸದಿಂದ ಬದುಕುವಂತಹ ಕೌಶಲ್ಯಗಳು, ತರಬೇತಿ ವಿಧಾನ ಇತ್ಯಾದಿ ಎಲ್ಲಾ ಅಂಶಗಳೂ ಅಡಕವಾಗಿರುವಂತಹ ರಾಷ್ಟ್ರೀಯ ಶಿಕ್ಷಣ ಪದ್ಧತಿಯನ್ನು ಕುರಿತಂತೆ ಆಕೆ ಆಳವಾಗಿ ಚಿಂತಿಸಿದ್ದಾಳೆ. ಜ್ಞಾನ ಪ್ರಸಾರವು ತುರ್ತಾಗಿ ಆಗಲೇಬೇಕು; ಅದಿಲ್ಲದೆ ದೇಶದೊಳಗೆ ಐಕ್ಯತೆಯನ್ನು ಪರಿಣಾಮಕಾರಿಯಾಗಿ ಸಾಧಿಸಲಾಗುವುದಿಲ್ಲ ಎಂದು ಆಕೆಯ ಅಭಿಪ್ರಾಯ. ಅವಳು ಪ್ರತಿಪಾದಿಸಿರುವ ಎಲ್ಲಾ ತತ್ತ್ವಗಳ ಮತ್ತು ಸಾಮಾಜಿಕ ಚಿಂತನೆಗಳ ಹಿನ್ನೆಲೆಯಲ್ಲಿ ಸ್ವಾಮಿ ವಿವೇಕಾನಂದರ ಶಕ್ತಿ ಮತ್ತು ಸ್ಫೂರ್ತಿಯ ಪ್ರೇರಣೆಯಿರುವುದನ್ನು ನಾವು ಸ್ಪಷ್ಟವಾಗಿ ಗುರುತಿಸಬಹುದಾಗಿದೆ. ಯಾವುದೇ ವಿಷಯವನ್ನು ಆಳವಾಗಿ ಅಧ್ಯಯನ ಮಾಡುವ ಮುನ್ನ ವಿದ್ಯಾರ್ಥಿಗಳ ಮನಸ್ಸು ಸಂಗ್ರಹಗೊಂಡು ಏಕಾಗ್ರತೆಯನ್ನು ಸಾಧಿಸುವ ಸನಾತನ ಭಾರತೀಯ ವಿದ್ಯೆಯನ್ನು ಸ್ವಾಮೀಜಿಯವರಂತೆಯೇ ನಿವೇದಿತಾ ಕೂಡಾ ಅನುಮೋದಿಸುತ್ತಾಳೆ. ಪ್ರಾಚೀನ ಕಾಲದಲ್ಲಿ ಯಾವ ಅದ್ಭುತ ಕಾರ್ಯಗಳನ್ನು ಭಾರತೀಯರು ಸಾಧಿಸಿದ್ದರೋ ಅದನ್ನು ಭವಿಷ್ಯದಲ್ಲಿಯೂ ಸಾಧಿಸಬಲ್ಲರು. ಭಾರತೀಯ ಮನೋಭೂಮಿಕೆಯಲ್ಲಿ ನಿದ್ರಿಸುತ್ತಿರುವ ಮಹಾಶಕ್ತಿಯೊಂದು ಸುಪ್ತವಾಗಿದೆ ಎಂಬುದನ್ನು ಆಕೆಯೂ ಗುರುತಿಸಿ ಅದಕ್ಕೆ ಒತ್ತು ನಿಡಿದ್ದಾಳೆ. ಭಾರತೀಯ ಸಮಸ್ಯೆಗಳನ್ನು ಬಗೆಹರಿಸಲು ಭಾರತೀಯರ ಮನಸ್ಸುಗಳೇ ಕೇಂದ್ರೀಕೃತಗೊಂಡು ಸಿದ್ಧವಾಗಬೇಕಾಗಿದೆ. ಆದ್ದರಿಂದ ಈ ದೇಶದಲ್ಲಿ ಬೆಳೆದುಬಂದಿರುವ ಪ್ರಾಚೀನ ಪದ್ಧತಿಯಲ್ಲಿದ್ದ ಪರಿಣಾಮಕಾರಿ ವಿಧಾನಗಳನ್ನು ನಿರ್ಲಕ್ಷಿಸಿದರೆ ರಾಷ್ಟ್ರದ ಪ್ರಗತಿಯು ಕುಂಠಿತವಾಗುತ್ತದೆ ಎಂದು ಆಕೆ ಭಾವಿಸಿದ್ದಳು. ಮಕ್ಕಳಲ್ಲಿ ವಿನಯವಂತಿಕೆ, ಮುಗ್ಧತೆ, ಕೋಮಲತೆಗಳನ್ನು ಬೇರುಸಹಿತ ಕಿತ್ತುಬಿಸಾಡುವ ಮೆದುಳಿನ ಶಿಕ್ಷಣವು ನಿಜವಾದ ಶಿಕ್ಷಣವಾಗಿರಲು ಸಾಧ್ಯವಿಲ್ಲ. ಆಧುನಿಕ ಶಿಕ್ಷಣವೂ ಕೂಡಾ ಮೊದಲು ಚಾರಿತ್ರ್ಯದ ಬೆಳವಣಿಗೆಗೆ ಒತ್ತುಕೊಟ್ಟು ನಂತರ ಬೌದ್ಧಿಕ ಬೆಳವಣಿಗೆ ಕಡೆಗೆ ಗಮನ ನೀಡಬೇಕಾಗಿದೆ. ಆದ್ದರಿಂದ ಜೀವಚೈತನ್ಯ ಮತ್ತು ಮನಸ್ಸಿನಲ್ಲಿ ಸ್ವಭಾವಸಿದ್ಧವಾಗಿರುವ ಅನೇಕ ಉತ್ತಮ ಗುಣಗಳನ್ನು ಪ್ರಗತಿಯ ನೆಪದಲ್ಲಿ ಆಧುನಿಕ ಶಿಕ್ಷಣವು ನಿರ್ಲಕ್ಷಿಸಲಾಗುವುದಿಲ್ಲ. ಸ್ವಭಾವದಲ್ಲಿ ಉತ್ತಮ ಚಾರಿತ್ರ್ಯ ಮತ್ತು ಬುದ್ಧಿಯ ತೀಕ್ಷ್ಣತೆಗಳ ಸಾಮರಸ್ಯವನ್ನು ಈ ಕ್ಷೇತ್ರದಲ್ಲಿ ಸಾಧಿಸಬೇಕು. ಹೆಣ್ಣುಮಕ್ಕಳ ಶಿಕ್ಷಣ ಮತ್ತು ತರಬೇತಿಯಲ್ಲಿ ನಾವು ನಮ್ಮ ಧ್ಯೇಯವನ್ನು ಕುರಿತು ಸ್ಪಷ್ಟತೆಯನ್ನು ಹೊಂದಿರಬೇಕು. ಭಾರತದ ಇತಿಹಾಸ,


ಸಂಸ್ಕೃತಿ ಮತ್ತು ಸಾಹಿತ್ಯದಲ್ಲಿ ಪ್ರಸಿದ್ಧವಾಗಿರುವ ಸ್ತ್ರೀಯರ ಆದರ್ಶ ಗುಣ ಸ್ವಭಾವಗಳನ್ನು ಹೆಣ್ಣುಮಕ್ಕಳ ಸ್ಫೂರ್ತಿನೆಲೆಯಾಗಿ ನಿಲ್ಲಿಸಬೇಕು. ಆಗ ಶಿಕ್ಷಣವು ರಾಷ್ಟ್ರೀಯ ಪ್ರಜ್ಞೆಯನ್ನು ದೇಶದೊಳಗೆ ಬೆಳೆಸುವ ಪ್ರಕ್ರಿಯೆಯಲ್ಲಿ ಒಂದು ಪ್ರಧಾನ ಉಪಕರಣವಾಗುವುದು ಎಂಬುದು ನಿವೇದಿತಾಳ ಕಾಣ್ಕೆಯಾಗಿದೆ.

ಐದನೆಯ ಸಂಪುಟದಲ್ಲಿ ಮೊದಲನೆಯ ಅಧ್ಯಾಯವು ಮತ್ತೆ ಶಿಕ್ಷಣವನ್ನೇ ಕುರಿತದ್ದಾಗಿದೆ. ಭಾರತೀಯ ಸಮಾಜದ ಆಧುನಿಕ ಸಂದರ್ಭದಲ್ಲಿ ಮಹಿಳೆಯ ಶಿಕ್ಷಣದ ಸ್ವರೂಪವು ಹೇಗಿರಬೇಕು ಎಂಬುದನ್ನು ಆಕೆ ತುಂಬ ಗಂಭೀರವಾಗಿ, ಪ್ರಾಯೋಗಿಕವಾಗಿ ಚಿಂತಿಸಿದ್ದಾಳೆ. ಭಾರತೀಯ ಸ್ತ್ರೀಯರ ಉದ್ಧಾರಕ್ಕಾಗಿಯೇ ಆಕೆಯನ್ನು ಸ್ವಾಮೀಜಿಯವರು ಕರೆತಂದಿರುವುದರಿಂದ, ಆ ಕೆಲಸವನ್ನು ಆಕೆ ಎಷ್ಟು ಜವಾಬ್ದಾರಿಯುತವಾಗಿ ನಿರ್ವಹಿಸಿದಳು ಎಂಬುದಕ್ಕೆ ಜ್ವಲಂತ ಸಾಕ್ಷಿಯಾಗಿ ಈ ಎಲ್ಲಾ ಲೇಖನಗಳು ಮತ್ತು ಪ್ರಬಂಧಗಳು ನಿಲ್ಲುತ್ತವೆ.

ನಮ್ಮ ಕುತೂಹಲವನ್ನು ಕೆರಳಿಸುವಂತಹ ಸ್ವಾಮಿ ವಿವೇಕಾನಂದರ ಸಂದರ್ಶನದ ಸಂಭಾಷಣೆಯನ್ನು ಇಲ್ಲಿ ನಾವು ಕಾಣುತ್ತೇವೆ. ಯಾವ ಯಾವ ವಿಷಯಗಳ ಬಗ್ಗೆ ನಿವೇದಿತಾ ಲೇಖನಗಳನ್ನು ಬರೆದಿದ್ದಳೋ, ಅವುಗಳಲ್ಲಿ ಉಪಲಬ್ಧವಿರುವ ಎಲ್ಲವನ್ನೂ ಬರೆದು ಸಂಗ್ರಹಿಸಿ ಈ ಕೊನೆಯ ಸಂಪುಟದಲ್ಲಿ ಕೊಡಲಾಗಿದೆ. ಹಿಂದೂ ಜೀವನ, ಚಿಂತನೆ ಮತ್ತು ಧರ್ಮ, ಭಾರತದ ರಾಜಕೀಯ, ಆರ್ಥಿಕ, ಕೆಲವು ವ್ಯಕ್ತಿಚಿತ್ರಣಗಳು, ಕಲೆ, ವಿಜ್ಞಾನ ಮುಂತಾದ ಕ್ಷೇತ್ರಗಳ ಆಯ್ದ ವಿಷಯಗಳ ಪುನರವಲೋಕನ, ದಿನ ಪತ್ರಿಕೆಗಳಲ್ಲಿ ಪ್ರಕಟವಾದ ಆಕೆಯ ಸಂದರ್ಶನಗಳು, ಭಾಷಣಗಳು, ವರದಿಗಳು ಇತ್ಯಾದಿಗಳನ್ನು ಸಂಗ್ರಹಿಸಿ ಮುದ್ರಿಸಿದ್ದಾರೆ. ಕೊನೆಯದಾಗಿ, ಸ್ವಾಮಿ ವಿವೇಕಾನಂದರನ್ನು ಭೇಟಿಯಾಗುವ ಮುನ್ನವೇ ಮಾರ್ಗರೆಟ್ ನೋಬಲ್ ಬರೆದಿದ್ದ ಕೆಲವು ಲೇಖನಗಳೊಡನೆ ಐದನೆಯ ಸಂಪುಟವು ಮುಕ್ತಾಯವಾಗುತ್ತದೆ.

ಚಿಂತಕಿಯಾಗಿ, ಲೇಖಕಿಯಾಗಿ, ಸಮಾಜ ಸುಧಾರಕಿಯಾಗಿ, ತತ್ತ್ವಜ್ಞಾನಿಯಾಗಿ, ಶಿಕ್ಷಣ ತಜ್ಞೆಯಾಗಿ, ಸ್ತ್ರೀಸ್ವಾತಂತ್ರ್ಯ ಹೋರಾಟಗಾರ್ತಿಯಾಗಿ, ಭಾರತಪ್ರೇಮಿಯಾಗಿ, ಪೂರ್ವ-ಪಶ್ಚಿಮಗಳ ನಡುವಿನ ಸಮರ್ಥ ಸೇತುವೆಯಾಗಿ, ಕಲಾವಿಮರ್ಶಕಿಯಾಗಿ, ಸಾಹಿತಿಯಾಗಿ, ಆಧ್ಯಾತ್ಮಿಕ ಸಾಧಕಿಯಾಗಿ, ಶ್ರೀಮಾತೆಯವರ ಮತ್ತು ಶ್ರೀರಾಮಕೃಷ್ಣರ ಮುದ್ದುಕಂದಳಾಗಿ, ಸ್ವಾಮಿ ವಿವೇಕಾನಂದರ ನಿಷ್ಠಾವಂತ ಶಿಷ್ಯೆ ಮತ್ತು ಮಾನಸಪುತ್ರಿಯಾಗಿ ಸೋದರಿ ನಿವೇದಿತಾ ತನ್ನ ಅಳಿಸಲಾಗದ, ಮರೆಯಬಾರದ ಹೆಜ್ಜೆಗುರುತುಗಳನ್ನು ಈ ಸಮಗ್ರ ಕೃತಿಶ್ರೇಣಿಯ ಐದು ಸಂಪುಟಗಳಲ್ಲಿ ನಮಗಾಗಿ ಬಿಟ್ಟು ಹೋಗಿದ್ದಾಳೆ. ಈ ಕೃತಿಗಳಲ್ಲಿ ನಾವು ಅವಳ ಭವ್ಯವ್ಯಕ್ತಿತ್ವದ ಬಹುಮುಖಿ ಆಯಾಮಗಳನ್ನು ದರ್ಶಿಸುತ್ತೇವೆ.

ಆ ವಿಷಯಗಳನ್ನೆಲ್ಲಾ ಪರಿಪೂರ್ಣವಾಗಿ ಹಲವಾರು ಇತಿಮಿತಿಗಳಿರುವ ಈ ಲೇಖನದ ಚೌಕಟ್ಟಿನಲ್ಲಿ ತರುವುದು ಸಾಧ್ಯವೆಂಬ ತಪ್ಪು ಕಲ್ಪನೆಯು ಈ ಲೇಖಕನಿಗೆ ಇರುವುದಿಲ್ಲ. ಆಸಕ್ತರೂ, ಶ್ರದ್ಧಾವಂತರೂ ಆದ ಸಾಧಕ ಭಕ್ತರು ಮೂಲಕೃತಿಗಳನ್ನೇ ಸಾವಧಾನವಾಗಿ ಅಧ್ಯಯನ ಮಾಡಿ ಸೋದರಿ ನಿವೇದಿತಾಳ ಆತ್ಮಶಕ್ತಿಯ ಅಭಿವ್ಯಕ್ತಿಯನ್ನು ಕಾಣಬೇಕು. ಅದಕ್ಕಾಗಿ ನಾವು ಆಕೆಯ ಕೃತಿಗಳ ಮುಂದೆ ಅಹಂಕಾರ ನಿರಸನದಿಂದ ಪ್ರಾಪ್ತವಾಗುವ ಮೌನದಿಂದ ಧ್ಯಾನಸ್ಥರಾಗಬೇಕಾಗುತ್ತದೆ. ಸೋದರಿ ನಿವೇದಿತಾಳ ಕ್ರಿಯಾಶೀಲ ವ್ಯಕ್ತಿತ್ವದ ಅಂತರಂಗದಲ್ಲಿ ಸ್ವಾಮಿ ವಿವೇಕಾನಂದರ ವಿರಾಟ್ ವ್ಯಕ್ತಿತ್ವದ ಶಕ್ತಿ ಸನ್ನಿಧಿಯನ್ನು ಗುರುತಿಸಿದರೆ ಈ ಲೇಖನವು ಪೂರ್ಣ ಸಾರ್ಥಕತೆ ಪಡೆಯಿತು ಎಂದು ಆತ್ಮವಿಶ್ವಾಸದಿಂದ ಭಾವಿಸಬಹುದು. ❖



**ಶುದ್ಧ ಭಕ್ತಿಯಲ್ಲಿ ಯಾವ ಕಾಮನೆಯೂ ಇರದು. ಈ ಭಕ್ತಿಯ ಮೂಲಕ ಭಗವಂತನ ಸಾಕ್ಷಾತ್ಕಾರವನ್ನು ಪಡೆದುಕೊಂಡುಬಿಡಬಹುದು.**

**ವ್ಯಾಕುಲಚಿತ್ತದಿಂದ ಭಗವಂತನಿಗೆ ಪ್ರಾರ್ಥನೆ ಮಾಡಬೇಕು. ಹೃತ್ಪೂರ್ವಕ ಪ್ರಾರ್ಥನೆಗೆ ಆಗ ಕಿವಿಗೊಟ್ಟೇ ಕೊಡುತ್ತಾನೆ.**

**-ಶ್ರೀರಾಮಕೃಷ್ಣರು**



**ಈ ಮಾನವದೇಹ ಲಭಿಸಿದ್ದರಿಂದ ನೀನು ಅದೃಷ್ಟಶಾಲಿ. ಎಷ್ಟು ಸಾಧ್ಯವೋ ಅಷ್ಟು ದೇವರಿಗೆ ಪ್ರಾರ್ಥನೆ ಸಲ್ಲಿಸು. ನೀನು ಕಠಿಣ ಶ್ರಮ ವಹಿಸಿ ಕೆಲಸ ಮಾಡಬೇಕು. ಶ್ರಮವಿಲ್ಲದೆ ಏನನ್ನೂ ಪಡೆಯಲಾಗದು. ಪ್ರಾಪಂಚಿಕ ಕೆಲಸಗಳ ನಡುವೆ ಕೂಡ ಪ್ರತಿನಿತ್ಯ ಪ್ರಾರ್ಥನೆ, ಆಧ್ಯಾತ್ಮಿಕ ಸಾಧನೆಗಳಿಗಾಗಿ ಸ್ವಲ್ಪ ಹೊತ್ತನ್ನು ಮೀಸಲಿಡಬೇಕು.**

**- ಶ್ರೀಶಾರದಾ ದೇವಿ**